# ಹೊನ್ನಾವರ ತಾಲೂಕಿನ ರಾಮಕ್ಷತ್ರಿಯ ಸಮಾಜದ ಸಂಸ್ಕೃತಿ

## ಸಂಶೋಧನಾ ಕಿರು ಪ್ರಬಂಧ

ಕರ್ನಾಟಕ ವಿಶ್ವ ವಿದ್ಯಾಲಯ
ಧಾರವಾಡ

**ಸ್ನಾತ್ತಕೋತ್ತರ ಕನ್ನಡ ಪದವಿ**


**ಸಂಶೋಧಕರು**

ನೀಹಾ

ರಜಿಸ್ಟರ್ ನಂ : 18A01008

**ಮಾರ್ಗದರ್ಶಕರು**

ಡಾ॥ ಸುರೇಶ ಎನ್. ನಾಯ್ಕ
ಕನ್ನಡ ಉಪನ್ಯಾಸಕರು,
ಅಂಜುಮನ್ ಕನ್ನಡ ಸ್ನಾತ್ತಕೋತ್ತರ ಕೇಂದ್ರ,
ಭಟ್ಕಳ, (ಉತ್ತರ ಕನ್ನಡ)


ಕರ್ನಾಟಕದ ವಿಶ್ವವಿದ್ಯಾಲಯದ ಎಂ.ಎ. ಪದವಿಯ
4 ನೇ ಸೆಮಿಸ್ಟರ್‌ಗಾಗಿ ಒಪ್ಪಿಸಿದ ಕಿರು ಪ್ರಬಂಧ


ಅಂಜುಮನ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾ ವಿದ್ಯಾಲಯ
ಹಾಗೂ ಸ್ನಾತ್ತಕೋತ್ತರ ಕೇಂದ್ರ ಭಟ್ಕಳ (ಉ.ಕ) – 581320

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಮೇ- 2020

ಆರಿವೇ ಗುರು

KARNATAK UNIVERSITY DHARWAD

ಕರ್ನಾಟಕ ವಿಶ್ವ ವಿದ್ಯಾಲಯ,
ಧಾರವಾಡ

# ಘೋಷಣಾ ಪತ್ರ

ನಾನು ನೀಹಾ ಕನ್ನಡ ಎಂ.ಎ. ಪದವಿಗಾಗಿ **"ಹೊನ್ನಾವರ ತಾಲೂಕಿನ ರಾಮಕ್ಷತ್ರಿಯ ಸಮಾಜದ ಸಾಂಸ್ಕೃತಿಕ ಅಧ್ಯಯನ"** ಎಂಬ ಕಿರು ಪ್ರಬಂಧ ಆಯ್ಕೆ ಮಾಡಿಕೊಂಡು ಅದನ್ನು ಡಾ॥ ಸುರೇಶ ನಾರಾಯಣ ನಾಯ್ಕ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಡಾ॥ ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠಕ್ಕೆ ಸಾದರ ಪಡಿಸುತ್ತಿದ್ದೇನೆ. ಈ ಕಿರು ಪ್ರಬಂಧ ಈ ಮೊದಲು ಇಡಿಯಾಗಿ ಇಲ್ಲವೆ ಬಿಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸಂಶೋಧನಾ ವಿದ್ಯಾರ್ಥಿನಿ

ದಿನಾಂಕ : 15/09/2020
ಸ್ಥಳ : ಭಟ್ಕಳ

(ನೀಹಾ)

# ಪರಿವಿಡಿ


| ಅ.ನಂ | ವಿಷಯ | ಪುಟಗಳ ಸಂಖ್ಯೆ |
|---|---|---|
| ೧ | **ಅಧ್ಯಾಯ – ೧**<br>**ಅಧ್ಯಯನದ ಉದ್ದೇಶ, ಮತ್ತು ವ್ಯಾಪ್ತಿ**<br>ಅಧ್ಯಯನದ ಉದ್ದೇಶ<br>ವ್ಯಾಪ್ತಿ | ೨ - ೩ |
| ೨ | **ಅಧ್ಯಾಯ – ೨**<br>**ಹೊನ್ನವರ ತಾಲುಕಿನ ರಾಮಕ್ಷತ್ರಿಯ ಸಮಾಜದ ಭೌಗೋಳಿಕ ಪರಿಸರದ ಶೋಧ**<br>ಐತಿಹಾಸಿಕ ಹಿನ್ನೆಲೆ<br>ರಾಮಕ್ಷತ್ರಿಯ ಸಮಾಜದ ಉಪನಾಮಗಳು | ೪ - ೧೧ |
| ೩ | **ಅಧ್ಯಾಯ – ೩**<br>**ರಾಮಕ್ಷತ್ರಿಯ ಸಮಾಜದ ಸಾಮಾಜಿಕ ವ್ಯವಸ್ಥೆ (ಸಾಮಾಜಿಕ ಜೀವನ)**<br>ಕೌಟುಂಬಿಕ ಜೀವನ<br>ವಸತಿ ವ್ಯವಸ್ಥೆ<br>ಗೃಹ ಬಳಕೆಯ ವಸ್ತುಗಳು<br>ಉಡುಗೆ–ತೊಡುಗೆ<br>ಆಹಾರ ಪದ್ಧತಿ<br>ಜನಪದ ವೈದ್ಯ | ೧೨–೨೧ |
| ೪ | **ಅಧ್ಯಾಯ – ೪**<br>**ಆರ್ಥಿಕ ಜೀವನ**<br>ಉದ್ಯೋಗ<br>ಅ) ಕೃಷಿ<br>ಆ) ಪಶುಪಾಲನೆ | ೨೩–೨೭ |
| ೫ | **ಅಧ್ಯಾಯ – ೫**<br>**ರಾಮಕ್ಷತ್ರಿಯರ ಸಂಸ್ಕೃತಿ**<br>ಸಂಪ್ರದಾಯ ಮತ್ತು ನಂಬಿಕೆಗಳು<br>ಆಚರಣೆಗಳು<br>ಅ) ಜನನ ಸಂಸ್ಕಾರ<br>ಆ) ನಾಮಕರಣ<br>ಇ) ಅನ್ನ ಪ್ರಾಶನ<br>ಈ) ಮದುವೆ | ೨೭–೩೩ |
| ೬ | **ಅಧ್ಯಾಯ – ೬**<br>**ಧಾರ್ಮಿಕ ಜೀವನ ಮತ್ತು ಆಚರಣೆಗಳು**<br>ಅ) ದೈವಪೂಜನೆ<br>ಆ) ಕುಲದೇವರು<br>ಇ) ಹಬ್ಬಗಳು<br>ಈ) ಮಾಟ ಮಂತ್ರಗಳು | ೩೪–೩೭ |
| ೭ | **ಅಧ್ಯಾಯ – ೭**<br>**ಭಾಷಾ ಶೈಲಿ**<br>ಸಾಹಿತ್ಯ<br>ಕ್ರೀಡೆ<br>ಗಾದೆ<br>ಹಾಡು<br>ಒಗಟುಗಳು | ೩೮–೪೩ |

## ಅಧ್ಯಾಯ 1

# ಅಧ್ಯಾಯನ ಉದ್ದೇಶ ಮತ್ತು ವ್ಯಾಪ್ತಿ

ಮಾನವ ಜನಾಂಗದ ಚರಿತ್ರೆ ತುಂಬಾ ಧೀರ್ಘವಾದದ್ದು. ಮೂಲತಃ ಆದಿ ವಾಸಿಯಾಗಿದ್ದ ಮಾನವನು ಬರುಬರುತ್ತ ನಾಗರಿಕತೆಯತ್ತ ಹೆಜ್ಜೆ ಹಾಕಿ ಇಂದಿನ ಸ್ಥಿತಿಗೆ ಮುಟ್ಟಿದ್ದಾನೆ. ಆದಿ ಮಾನವನ ಜೀವನ ಮತ್ತು ನಾಗರಿಕ ಸಮಾಜದ ಬದುಕಿನ ಕ್ರಮಗಳಲ್ಲಿ ತುಂಬಾ ಅಂತರವಿದೆ. ನಾಗರಿಕತೆಯ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಇಡೀ ಮಾನವ ಸಮಾಜವೆಲ್ಲ ಬೆಳವಣಿಗೆಯ ಪ್ರಕ್ರಿಯೆಗೆ ತನ್ನನ್ನು ತೊಡಗಿಸಿಕೊಳ್ಳಲಿಲ್ಲ. ಮೂಲನಿವಾಸಿಗಳ ಕೆಲಗುಂಪುಗಳು ಅನಾಗರಿಕ ಸ್ಥಿತಿಯಲ್ಲಿ ಉಳಿದುಕೊಂಡು ತಮ್ಮ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಇಂದು ಆಧುನಿಕತೆಯ ಪ್ರಭಾವದಿಂದಾಗಿ ಮೂಲ ಸಂಸ್ಕೃತಿಯ ಅಂಶಗಳು ಮರೆಯಾಗುವ ಸ್ಥಿತಿಯಲ್ಲಿದೆ. ಅವು ಮರೆಯಾಗುವುದಕ್ಕಿಂತ ಮೊದಲೇ ಅವುಗಳನ್ನು ಗುರುತಿಸಿ ವಿಶ್ಲೇಷಿಸಿ ದಾಖಲಿಸುವ ಕಾರ್ಯ ನಡೆಯ ಬೇಕಾದದ್ದು ಅವಶ್ಯಕ.

ಭಾರತವು ಬಹು ಭಾಷಿತ, ಬಹು ಸಂಸ್ಕೃತಿಗಳ ನೆಲಬೀಡಾಗಿದೆ. ಭರತ ಭೂಮಿಯನ್ನು ಸರ್ವ ಧರ್ಮಗಳ ಉದ್ಯಾನವನ, ಮಹಾಮಾನವತೆಯ ಮಹಾ ಸಾಗರವೆಂದು ಕರೆಯಲಾಗಿದೆ. ಇಲ್ಲಿ ಜಗತ್ತಿನ ಮೂಲೆ ಮೂಲೆಗಳಿಂದ ವಲಸೆ ಬಂದ ಹೆಚ್ಚಿನ ಪ್ರಮುಖ ಧರ್ಮಗಳು ನೆಲೆಯನ್ನು ಪಡೆದಿದೆ. ಪ್ರಕೃತಿ ವಿಕೋಪ ಭೂಕಂಪನಗಳಿಂದ ಭೂಮಿಯ ಆಳದಲ್ಲಿ ಸಂಸ್ಕೃತಿ ಮರೆಯಾಗಿದ್ದರು ಸಂಸ್ಕೃತಿ ಮಾತ್ರ ಪೀಳಿಗೆಯಿಂದ ಪೀಳಿಗೆಗೆ ಮುಂದುವರೆದು ಜೀವಂತವಾಗಿರುವುದು ಕಂಡುಬರುತ್ತದೆ. ನೆಲದಲ್ಲಿ ಹುದುಗಿರುವ ಸತ್ಯವನ್ನು ಲೋಕಮುಖಕ್ಕೆ ಪರಿಚಯಿಸಬೇಕಾದ ಅಗತ್ಯವಿದೆ. ಹಲವು ಜಾತಿ ಪಂಗಡ ಸಮಾಜಗಳ ಸಂಸ್ಕೃತಿಗಳನ್ನು ಪರಿಚಯಿಸುವ ಅನೇಕ ಗ್ರಂಥಗಳು ಹೀಗಾಗಲೆ ಬೆಳಕು ಕಂಡಿದೆ. ಈ ಕಿರು ಪ್ರಬಂಧದ ಮೂಲಕ ಹೊನ್ನಾವರ ತಾಲೂಕಿನ ರಾಮಕ್ಷತ್ರಿಯ ಸಮಾಜದ ಸಂಸ್ಕೃತಿಯ ಬಗ್ಗೆ ಬರೆಯಲು ಮುಂದಾಗಿದ್ದೇನೆ.

ಬದುಕು ಸಾಧಿಸುತ್ತಿರುವ ಒಂದು ಜಾತಿ ತನ್ನದೇ ಆದ ಅನೇಕ ಜೀವನ ಪರ್ಯಾಂತದವರೆಗೂ ಅಚರಣೆಗಳಾಗಿರುತ್ತದೆ. ಇದು ಜಾತಿಯಿಂದ ಜಾತಿಗೆ ವಿಭಿನ್ನವಾಗಿರುತ್ತದೆ. ಹಾಗೆಯೇ ಈ ಹೊನ್ನಾವರ ತಾಲೂಕಿನ ರಾಮಕ್ಷತ್ರಿಯ ಸಮಾಜದ ಜೀವನ ಚಕ್ರವು ತನ್ನದೇ ಆದ ವೈಶಿಷ್ಟ್ಯ ಹೊಂದಿದೆ.

ಈ ರಾಮಕ್ಷತ್ರಿಯ ಸಮಾಜದಲ್ಲಿ ಎಲ್ಲರಂತೆಯೇ ಇರಬಹುದಾದ ಜನಪದ, ಸಾಹಿತ್ಯ, ಭಾಷೆ, ಮನೋರಂಜನಾ ಅಂಶಗಳು, ಕಲೆ ಮುಂತಾದ ಪ್ರತಿಭೆಗಳನ್ನು ಗುರುತಿಸಬಹುದು. ಒಟ್ಟಿನಲ್ಲಿ ಒಂದು ಜನಾಂಗ ಸಾಮಾಜಿಕ ಆವರಣದಲ್ಲಿ ಬದುಕು ಸಾಗಿಸಲು ಮಾಡಿಕೊಂಡು ಇರಬಹುದಾದ ವ್ಯವಸ್ಥೆ, ಕಟ್ಟಿಕೊಂಡ ನಾಗರಿಕತೆ, ಹೊಂದಿರುವ ಸಂಸ್ಕೃತಿ, ಧರ್ಮ ಇವೆಲ್ಲಾ ವಿಭಿನ್ನ ಮತ್ತು ವಿಶಿಷ್ಟ ವಾಗಿರುತ್ತದೆ. ಇವೆಲ್ಲದರ ಅಧ್ಯಯನ ಈ ಪ್ರಬಂಧದ ಉದ್ದೇಶ.

ಅಧ್ಯಯನದ ವ್ಯಾಪ್ತಿಯ ದೃಷ್ಟಿಯಿಂದ ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕಿನ ರಾಮಕ್ಷತ್ರಿಯ (ಶೇರುಗಾರ) ಜನಾಂಗದವರು 600 ವರ್ಷಗಳ ಹಿಂದೆ ಸುಮಾರು 14–15ನೇ ಶತಮಾನಗಳಿಂದ ಗೋವಾದಿಂದ ವಲಸೇ ಬಂದವರು. ಗೋವಾ ಗೆಝೆಟಿಯರಲ್ಲಿ ಉಲ್ಲೇಖವಾದಂತೆ ಇವರು ಗೋವಾದ ಮೂಲನಿವಾಸಿಗಳು. ತಮ್ಮ ರಾಜರ ಕೋಟೆಯ ಕಾವಲುಗಾರರಾಗಿ ಮತ್ತು ಬೇಟೆಗಾರರಾಗಿ ಸೇವೆ ಸಲ್ಲಿಸುತ್ತಿದ್ದರು. ತಪ್ಪನ್ 1909–99 ರಲ್ಲಿ ಅಭಿಪ್ರಾಯಪಟ್ಟಂತೆ ರಾಮಕ್ಷತ್ರಿಯ ಸಮಾಜದವರು 16ನೇ

# ಅಧ್ಯಾಯ 10

## ಸಮರೋಪ

ರಾಮಕ್ಷತರಿಯ ಸಮಾಜ ಒಂದು ಹಿಂದುಳಿದ ಜಾತಿ ಎಂಬಲ್ಲಿ ಅನುಮಾನವಿಲ್ಲ. ಸರಕಾರ ಇವರನ್ನು ಇತರೆ ಹಿಂದುಳಿದ ಜಾತಿ ಎಂದು ಪರಿಗಣಿಸಿದೆಇದಕ್ಕೆ ಗೆಜೆಟಿಯರ್ ನಲ್ಲಿ ಉಲ್ಲೇಖಗಳಿವೆ. ಮೂಲತಃ ವಿಜಯ ನಗರ ಅರಸರ ಆಶ್ರಯದಲ್ಲಿ ಅವರ ಕೋಟೆಗಳ ಸಂರಕ್ಷಕರಾಗಿ ಗುರುತಿಸಿಕೊಂಡು ನಂತರ ಮಹಾರಾಷ್ಟ್ರದ ರತ್ನಗಿರಿ ಸಮೀಪವಿರುವ ವಿಜಯದುರ್ಗ, ಸಿಂಧು ದುರ್ಗದಲ್ಲಿಯ ಕೋಟೆಗಳ ಕಾವಲುಗಾರರಾಗಿ ನಂತರ ಗೋವಾದ ಬೇರೆ ಬೇರೆ ಭಾಗಗಳಲಲಿ ವಾಸಿಸಿ ಅಲ್ಲಿ ಪೋರ್ಚುಗೀಸರ ಮುತಾಂತರ ಚಳುವಳಿಗೆ ಬೇಸತ್ತು ಕರ್ನಾಟಕದ ಕರಾವಳಿ ಭಾಗವಾದ ಉತ್ತರ ಕನ್ನಡ, ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಮ್ಮ ರಾಜರ ಕೋಟೆಯ ಪರಿಸರ ನದಿ ಮುಖಜ ಭಾಗದಲ್ಲಿ ಬಂದು ನೆಲೆನಿಲ್ಲುತ್ತಾರೆ. ತಮ್ಮ ಅರಸರ ಆಡಳಿತ ಕೊನೆಗೊಂಡ ನಂತರ ಬೇಟೆ. ಕೃಷಿ,ಪಶುಪಾಲನೆ, ಕೂಲಿ ಮೊದಲಾದ ವೃತ್ತಿಗಳನನು ಜೀವನ್ನಾಧಾರವನ್ನಾಗಿಟ್ಟುಕೊಂಡು ಬದುಕುತ್ತಾರೆ. ಸಮಾಜದ ಸಾಮಾಜಿಕ ಸಂಬಂಧಗಳನನು ನಂಬಿಕೆ ಸಂಪ್ರದಾಯಗಳಿಂದ ಬಲಪಡಿಸಿಕೊಂಡುತಮ್ಮದೇ ಆದ ಆಡಳಿತ ವ್ಯವಸ್ಥೆಯಿಂದ ಜೀವಿಸುತ್ತಾರೆ ಇವರು ಆರಾಧಿಸುವ ಸಾಂಸ್ಕೃತಿಕ ಅಂಶಗಳಲಲಿಲ ಏಕತೆಯನ್ನು ಕಾಣಲು ಸಾಧ್ಯವಿದೆ.ಕರ್ನಾಟಕ ಹಾಗೂ ಹೊರರಾಜ್ಯಗಳಲ್ಲಿ ನೆಲೆ ನಿಂತಿರುವ ಬೇರೆ ಬೇರೆ ಕುಲನಾಮಗಳಿಂದ ಕರೆಯಲ್ಪಡುವ ಶೇರುಗಾರರು ಒಂದೆ ಸಮಾಜದ ರಾಮಕ್ಷತ್ರಿಯರು ಎಂದು ಅಧ್ಯಯನದಿಮದ ತಿಳಿದು ಬರುತ್ತದೆ.

ರಾಮಕ್ಷತ್ರಿಯರು ವೀರಪುರಷರಾಗಿರುವುದರಿಂದ ತಮ್ಮ ಪ್ರತಿಷ್ಟೆಗಾಗಿ ತಾವು ವೈದಿಕ ಸಂಪ್ರದಾಯಸ್ಥರು ಎಂದು ಕಾಡಿಬೇಡಿ ಜನಿವಾರ ಧರಿಸಿರುವ ಇವರು ನಿಜವಾಗಿ ಒಂದು ಬುಡಕಟ್ಟು ಸಮಾಜಕ್ಕೆ ಸೇರುವ ಜಾತಿ ಎಂದು ಅಧ್ಯಯನದಿಂದ ಕಂಡುಬರುತ್ತದೆ. ಇದಕ್ಕೆ ಕೆಲವು ಲಿಖಿತ ದಾಖಲಾತಿಗಳು ಸಹ ಇದೆ. ಪುರೋಹಿತಶಾಹಿ ವರ್ಗದ ಸಂಸ್ಕೃತಿಯ ಪ್ರಭಾವದಿಂದ ತಮ್ಮ ಸಂಸ್ಕೃತಿಯ ಆಚರಣೆ – ವಿಧಿ – ವಿಧಾನಗಳಲಲಿ ಬದಲಾವಣೆ ಗೊಂಡಿರುವ ಸಾಧ್ಯತೆ ಇದೆ. ಇವರ ಶಾಲಾ ದಾಖಲಾತಿಯಲ್ಲಿ ಕೋಟೆಗಾರ, ಸೇರ್ವೆಗಾರ, ಸೇರುಗಾರ, ನಾಯ್ಕ, ಹಿಂದು ಕ್ಷತ್ರಿಯ, ನಾಯಕ. ಈ ಮುಂತಾದ ಹೆಸರುಗಳು ಕಂಡು ಬರುತ್ತದೆ. ಈ ಸಮಾಜ ತಮ್ಮ ಭೌಗೋಳಿಕ ಹಾಗೂ ಸಂಖ್ಯಾವ್ಯಾಪ್ತಿಯಲ್ಲಿಯೇ ಒಂದು ವಿಶಿಷ್ಟಯೆನ್ನಬಹುದಾದ ಸಾಂಸ್ಕೃತಿಕ ಜಗತ್ತನ್ನು ನಿರ್ಮಿಸಿಕೊಂಡಿದೆ. ನದುಮುಖಜ, ಸಹ್ಯಾದ್ರಿಯ ತಪ್ಪಲು ಪ್ರದೇಶ, ಕೋಟೆಯ ಪರಿಸರದಲ್ಲಿ ವಾಸಿಸುವ ಇವರ ಸಮಾಜ ತಮ್ಮದೇ ಆದ ಸ್ವರೂಪವನ್ನು ಪಡೆದುಕೊಂಡಿದೆ. ಒಂದು ಭಾಗದಲ್ಲಿ